ಕರ್ನಾಟಕ ಸರ್ಕಾರ
Government Of Karnataka
ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ
Karnataka State Rural Development and Panchayat Raj University, Gadag
ರೈತ ಭವನ, ಜನರಲ್ ಕಾರ್ಯಪ್ಪ ವೃತ್ತ, ಗದಗ– 582 101
Raith Bhavan Building, Genral Carippa Circle, Gadag – 582 101
email: registrarksrdpru@gmail.com Office Phone: 08372-230338, Fax:08372-297343

ಕ್ರಮ ಸಂಖ್ಯೆ : ಕರಾಗ್ರಾಅಪಂರಾವಿವಿ/ಅಶಿನೇ/2017–18 ದಿನಾಂಕ: 01–08–2017

## ಪತ್ರಿಕಾ ಪ್ರಕಟಣೆ

**ವಿಷಯ:** ಪೂರ್ಣಕಾಲಿಕ, ಅರೆಕಾಲಿಕ ಅತಿಥಿ ಉಪನ್ಯಾಸಕರು ಮತ್ತು ಇತರೆ ತಾತ್ಕಾಲಿಕ ಅಧ್ಯಾಪಕರ ನೇಮಕಾತಿ ಕುರಿತು.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ, 2017–18ನೇ ಸಾಲಿನಿಂದ ಪ್ರಾರಂಭಿಸುವ ಈ ಕೆಳಕಂಡ ಸ್ನಾತಕೋತ್ತರ ಕೋರ್ಸುಗಳನ್ನು ಬೋಧಿಸಲು ಪೂರ್ಣಕಾಲಿಕ/ಅರೆಕಾಲಿಕ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **ವಿದ್ಯಾರ್ಹತೆ:** ಸ್ನಾತಕೋತ್ತರ ವಿಷಯದಲ್ಲಿ ಶೇ.55 ಅಂಕಗಳನ್ನು ಪಡೆದಿರಬೇಕು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ದೈಹಿಕವಾಗಿ ಮತ್ತು ದೃಷ್ಟಿವಿಭಿನ್ನರಿಗೆ ಶೇ.50 ಅಂಕಗಳು. ಪಿಹೆಚ್‌ಡಿ/ಎನ್‌ಇಟಿ/ಎಸ್‌ಎಲ್‌ಇಟಿ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಇತರೆ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.

ಬೇರೆ ವಿಶ್ವವಿದ್ಯಾಲಯಗಳಲ್ಲಿ/ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಅಧ್ಯಾಪಕರು ನಿಯೋಜನೆ ಮೇಲೆ ಬರಲು ಸಹ ಅರ್ಜಿ ಸಲ್ಲಿಸಬಹುದು. ಗೌರವ/ಎಮಿರಿಟಸ್ ಪ್ರೊಫೆಸರ್/ಸಂದರ್ಶಕ ಶಿಕ್ಷಕರಾಗಿ ಕಾರ್ಯನಿರ್ವಹಿಸಲು ಇಚ್ಛಿಸುವವರು ಸಹಾ ಅರ್ಜಿ ಸಲ್ಲಿಸಬಹುದು. ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದಿರುವವರು ಸಂಶೋಧನಾ/ಪ್ರಾಜೆಕ್ಟ್ ಫೆಲೋ ಆಗಲು ಅರ್ಜಿ ಸಲ್ಲಿಸಬಹುದು. ಅರ್ಹ ಅಭ್ಯರ್ಥಿಗಳು ಸ್ವ–ವಿವರ ಮತ್ತು ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು **ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ರೈತಭವನ, ಗದಗ–582101,** ಇವರಿಗೆ ದಿನಾಂಕ **07–08–2017** ರೊಳಗೆ ತಲುಪುವಂತೆ ಕಳುಹಿಸಬೇಕು. ಸಂಭಾವನೆಯನ್ನು ವಿಶ್ವವಿದ್ಯಾಲಯದ ನಿಯಮಗಳನುಸಾರ ಪಾವತಿಸಲಾಗುವುದು.

ಕೋರ್ಸುಗಳ ವಿವರ :

1. ಎಂ.ಬಿ.ಎ–ಗ್ರಾಮೀಣ ನಿರ್ವಹಣೆ (ಕೃಷಿ ವ್ಯವಹಾರ ನಿರ್ವಹಣೆ, ಗ್ರಾಮೀಣಾಭಿವೃದ್ಧಿ ನಿರ್ವಹಣೆ ಹಾಗೂ ಗ್ರಾಮೀಣ ಉದ್ಯಮಶೀಲತಾ ನಿರ್ವಹಣೆ ಪರಿಣಿತಿಯೊಂದಿಗೆ.)
2. ಎಂ. ಎ. –ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
3. ಎಂ.ಎಸ್ಸಿ. –ಜಿಯೋಇನ್ಫರ್‌ಮೇಟಿಕ್ಸ್
4. ಎಂ.ಎಸ್.ಡಬ್ಲ್ಯೂ– ಗ್ರಾಮೀಣ ಪುನರ್‌ನಿರ್ಮಾಣ
5. ಎಂ.ಎಂ.ಎಸ್ ( ಮಾಸ್ಟರ್ ಆಫ್ ಮ್ಯಾನೇಜಮೆಂಟ್ ಸ್ಟಡೀಸ್) – ಕೌಶಲ್ಯ ಮತ್ತು ಉದ್ಯಮ ಶೀಲತೆ ಅಭಿವೃದ್ಧಿ

ಅರ್ಹ ಅಭ್ಯರ್ಥಿಗಳಿಗೆ ದಿನಾಂಕ **10–08–2017** ರ ಗುರುವಾರ ಮತ್ತು **11–08–2017** ರಂದು ಶುಕ್ರವಾರ ಬೆಳಗ್ಗೆ **11–00** ಗಂಟೆಗೆ, ವಿಶ್ವವಿದ್ಯಾಲಯದ ಕಛೇರಿ, ಗದಗ ದಲ್ಲಿ ಸಂದರ್ಶನ ನಡೆಸಲಾಗುವುದು. ಬೋಧನೆಗೆ ಅವಶ್ಯವಿರುವಷ್ಟು ಜನರನ್ನು ಮಾತ್ರ ನೇಮಕ ಮಾಡುವ ಅಧಿಕಾರ ವಿಶ್ವವಿದ್ಯಾಲಯಕ್ಕಿರುತ್ತದೆ. ಸಂದರ್ಶನಕ್ಕೆ ಹಾಜರಾಗುವವರಿಗೆ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ.

ವಿದ್ಯಾರ್ಹತೆಯ ವಿವರಗಳಿಗೆ ಮತ್ತು ಸಂದರ್ಶನದ ದಿನಾಂಕದಲ್ಲಿ ಬದಲಾವಣೆಗಳಿಗೆ ವಿಶ್ವವಿದ್ಯಾಲಯದ ಅಂತರ್ಜಾಲವನ್ನು www.ksrdpru.in ನೋಡಬಹುದು.

ಕುಲಸಚಿವರು

ಸಂಪಾದಕರು –

ಮೇಲಿನ ಪ್ರಕಟಣೆಯನ್ನು ತಮ್ಮ ದಿನಪತ್ರಿಕೆಯಲ್ಲಿ ಸುದ್ದಿಯನ್ನಾಗಿ ಪ್ರಕಟಿಸಬೇಕೆಂದು ಕೋರಲಾಗಿದೆ.